**ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ.ಸಿ.ನಂ:2567/2022**

**ಫಿರ್ಯಾದಿ** : **ಶ್ರೀ ರಾಮನಾಥ ಪತ್ತಿನ ಸಹಕಾರಿ ಸಂಘ ನಿಯಮಿತ.,**
ಹೊನ್ನಾವರ, ನಿಷ್ಪತ್ ಶಾಖಾ ವ್ಯವಸ್ಥಾಪಕರು, ಶ್ರೀ ದೀಪಕ ಡಿ. ನಾಯ್ಕ,
ಸಾಯಿದರ್ಶನ ಕಾಂಪ್ಲೆಕ್ಸ್, ಹೊನ್ನಾವರ, ತಾಃ ಹೊನ್ನಾವರ, ಉ.ಕ.,

**ವಿರುದ್ಧ**

ಆರೋಪಿಯ ಹೆಸರು : ಶ್ರೀ ಚಂದ್ರಕಾಂತ ದೇವು ಮುಕ್ರಿ ತಂದೆ ದೇವು ಮುಕ್ರಿ
ಸಾಃ ಜೋಗ್ನಿಕಟ್ಟೆ ಹಳದಿಪುರ, ತಾಃ ಹೊನ್ನಾವರ ಉ.ಕ.,

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ರೀತ್ಯಾ ಆರೋಪಿಯ ಮುಂದುವರೆದ ಹೇಳಿಕೆಃ**

ಪ್ರಶ್ನೆಃ 1. ನ್ಯಾಯಾಲಯದಲ್ಲಿ ಅಭಿಯೋಜನಾ ಪರ ಸಾಕ್ಷಿದಾರರು ಹೇಳಿದ್ದನ್ನು ಕೇಳಿದಿರಾ?

ಉತ್ತರಃ

**ಪ್ರಶ್ನೆಃ 2 ಫ್ರಾಸಾ 1 ರವರು ಮುಂದುವರಿದು,** ತಾನು 2014 ರಿಂದ ದೂರುದಾರ ಸೊಸೈಟಿಯಲ್ಲಿ ಮೊದಲು ಕ್ಲರ್ಕ ಆಗಿದ್ದು, ಈಗ ಅಕೌಂಟೆಂಟಾಗಿ 2021 ರಲ್ಲಿ ವರ್ಗಾವಣೆಗೊಂಡು ಹೊನ್ನಾವರ ಬ್ರಾಂಚಿಗೆ ಬಂದಿದ್ದು, ಆರೋಪಿತನು 2021 ರ ಮೇ ತಿಂಗಳಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ್ದು, ನಂತರ ಅವರಿಗೆ ವೈಯಕ್ತಿ ಸಾಲ ನೀಡಿ ಇಬ್ಬರು ಜಾಮೀನುದಾರರನ್ನು ಪಡೆದಿದ್ದು, ಸಾಲದ ಕಂತು 5951/ ರೂ ಆಗಿದ್ದು ಹಾಗೂ ಮೂರು ವರ್ಷಗಳ ಕಂತಾಗಿದ್ದು, ಆರೋಪಿ ಇದುವರೆಗೂ 15 ಸಾವಿರ ರೂಗಳನ್ನು ಮಾತ್ರ ಮರುಪಾವತಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆಃ 4 ಫ್ರಾಸಾ 1 ರವರು ಮುಂದುವರಿದು** ನಂತರ ಸದರಿ 15 ಸಾವಿರ ಮೊತ್ತವನ್ನು ಯಾವಾಗ ಮರುಪಾವತಿ ಮಾಡಿದ್ದರು ಎಂದರೆ ಸಾಕ್ಷಿ 2021 ರಲ್ಲಿ ಮಾಡಿದೆ ಎಂದು ನುಡಿದಿದ್ದು, ಆರೋಪಿಗೆ ಸಾಲ ಮರುಪಾವತಿ ಮಾಡಲು ವಿಫಲರಾದಾಗ ಅವರಿಗೆ ಹಾಗೂ ಜಾಮೀನುದಾರರಿಗೆ ನಾಲ್ಕೈದು ಬಾರಿ ಅಂಚೆ ಮೂಲಕ ನೋಟಿಸ್ ಕೊಟ್ಟಿದ್ದು, ನಂತರ ಆರೋಪಿತನು ಅವರಿಗೆ 72 ಸಾವಿರ ಚೆಕ್ ಕೊಟ್ಟಿದ್ದು ಅದನ್ನು ಕೊಡುವುವಾಗ 72 ಸಾವಿರ ಕೊಡುವುದು ಬಾಕಿ ಇದ್ದು, ನಂತರ ಸಾಕ್ಷಿ ಮುಂದುವರಿದು ಅದು ಕಟ್ ಬಾಕಿ ಮೊತ್ತವಾಗಿದ್ದು ಅದನ್ನು ಪಾವತಿ ಮಾಡಿದರೆ ಅದು ರೆಗ್ಯೂಲರ್ ಆಗುತ್ತದೆ ಎಂದು ನುಡಿದಿದ್ದು, ಅವರು ಯಾರಿಗಾದರೂ ಸಾಲವನ್ನು ನಿಡೀಬೇಕಾದರೆ ಅವರು ಅವರ ಸಂಘದ ಸದಸ್ಯರಾಗಿ ಹಾಗೂ ಆ ಬಗ್ಗೆ ಅವರ ಸಂಘದಲ್ಲಿ ಠರಾವು ಆಗಿಬೇಕು ಹಾಗೂ ಆರೋಪಿ ಸಾಲ ನೀಡುವಾಗ ಅವರ ಸೊಸೈಟಿಯಲ್ಲಿ ಠರಾವು ಆಗಿದ್ದು, ಠರಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 6 ಈ ಮೊಕದ್ದಮೆ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರಃ

ಪ್ರಶ್ನೆಃ 7 ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಉತ್ತರಃ

ಆರೋಪಿತನ ಈ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬಹಿರಂಗನ್ಯಾಯಾಲಯದಲ್ಲಿ ಪಡೆದುಕೊಂಡಿದ್ದೇನೆ. ಇದರಲ್ಲಿನ ಎಲ್ಲಾ ಅಂಶವನ್ನು ಈ ಕಡತವು ಸಂಪೂರ್ಣವಾಗಿ ಒಳಗೊಂಡಿರುತ್ತದೆ.

**ದಿನಾಂಕಃ - -2024** (**ಚಂದ್ರಶೇಖರ ಈ ಬಣಕಾರ**).,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.